ಸ್ವಲ್ಪ ಆತಂಕದಿಂದ ನನ್ನನ್ನು ಕರೆಯುತ್ತಿದ್ದ. ''ನೀವು ಇಲ್ಲಿಂದ ದೀಪ ಏಕೆ ತೆಗೆದುಕೊಂಡು ಹೋದಿರಿ?'' ಅಂತ ಕೇಳಿದ. ''ನಿನಗೆ ಪೆಟ್ಟು ಬಿದ್ದು ಕೆಲವು ನಿಮಿಷ ಜ್ಞಾನ ತಪ್ಪಿತ್ತು. ಆದ್ದರಿಂದ ಯಾರಾದರೂ ಸಹಾಯಕ್ಕೆ ಸಿಗುತ್ತಾರೆಯೆ ಅಂತ ಹುಡುಕಿದೆ'' ಅಂದೆ.

''ಈ ಮನೆಯಲ್ಲಿ ನಾನೊಬ್ಬನೇ. ಇನ್ನಾರೂ ಇಲ್ಲ. ನನ್ನ ತಾಯಿಯ ತರಹ ನನ್ನದು ದುರ್ಬಲ ಹೃದಯ. ಆದ್ದರಿಂದ ಜ್ಞಾನ ತಪ್ಪಿರಬಹುದು. ಅಂದಹಾಗೆ ನೀವು ವೈದ್ಯರೆ? ನಿಮ್ಮ ಹೆಸರು ತಿಳಿಯಲಿಲ್ಲ.''

''ನನ್ನ ಹೆಸರು ಫ್ರಾಂಕ್ ಆಲ್ಡರ್. ನಾನೊಬ್ಬ ವಕೀಲ, ವೈದ್ಯನಲ್ಲ.''

''ನನ್ನ ಹೆಸರು ಫೀಲಿಕ್ಸ್ ಸ್ಟಾನಿಫೋರ್ಡ್. ಒಳ್ಳೆದಾಯಿತು, ನನ್ನ ಸ್ನೇಹಿತ ಪರ್ಸಿವಲ್ ನನಗೆ ಹೇಳಿದ್ದ, ನಮಗೆ ಒಬ್ಬ ವಕೀಲರ ಸಹಾಯ ಬೇಕಾಗಬಹುದು ಅಂತ.''

''ಹೇಳು, ನನ್ನಿಂದ ಏನು ಸಹಾಯ ಬೇಕು?''

''ಅದು ಪರ್ಸಿವಲ್‌ಗೆ ಗೊತ್ತು, ಅಂದಹಾಗೆ ನೀವು ದೀಪ ಹಿಡಿದು ಎಲ್ಲಾ ಕೋಣೆಗಳಿಗೂ ಹೋಗಿದ್ದೀರಲ್ಲ, ಅಲ್ಲಿ ಏನಾದರೂ ಗಮನಿಸಿದ್ದೀರಾ?''

''ಏನನ್ನು ಗಮನಿಸಬೇಕಾಗಿತ್ತು?''

''ಅದೇ ಒಂದು ಕೋಣೆಯ ಬಾಗಿಲಿಗೆ ಬೀಗ ಮತ್ತು ಮೊಹರು ಹಾಕಿದ್ದು.''

''ಹೌದು, ನೋಡಿದ್ದೇನೆ.''

''ನಿಮಗೆ ಅದನ್ನು ನೋಡಿ ಕುತೂಹಲವಾಗಲಿಲ್ಲವೇ?''

''ಹೌದು ಇದು ಅಸಹಜ ಅನ್ನಿಸಿತು ನಿಜ, ಆದರೆ ಅದು...''

''ನಾನು ಈ ಮನೆಯಲ್ಲಿ ಅನೇಕ ವರ್ಷಗಳಿಂದ ಒಬ್ಬನೇ ವಾಸವಾಗಿದ್ದೇನೆ; ನನಗೂ ಆ ಕೋಣೆಯಲ್ಲಿ ಏನಿದೆ ಅಂತ ತಿಳಿಯುವ ಕುತೂಹಲ.''

''ಏನು? ಈ ಮನೆಯಲ್ಲಿ ಇದ್ದೂ ನಿನಗೆ ಗೊತ್ತಿಲ್ಲವೇ, ನೀನೇ ಹೋಗಿ ನೋಡಬಹುದಲ್ಲ.''

''ಇಲ್ಲ, ಅದು ಸಾಧ್ಯವಿಲ್ಲ ಮತ್ತು ನಾನು ಹಾಗೆ ಮಾಡಲೂ ಬಾರದು.''

ಗಂಟೆ ಒಂಬತ್ತು, ನನಗೆ ಸಮಯ ಮೀರುತ್ತಿತ್ತು. ಹೇಗಿದ್ದರೂ ಫೀನಿಕ್ಸ್ ಪೂರ್ತಿ ಚೇತರಿಸಿಕೊಂಡಿದ್ದಾನೆ, ಇನ್ನೂ ಪ್ರಶ್ನೆ ಮಾಡಿದರೆ ನಾನು ಮನೆ ಸೇರುವುದು ತಡವಾಗುತ್ತದೆ. ಆದ್ದರಿಂದ ಹೊರಡಲು ಎದ್ದು ನಿಂತೆ.

''ಮಿಸ್ಟರ್ ಆಡ್ಲರ್, ನಿಮಗೆ ಏನೂ ತೊಂದರೆ ಆಗದಿದ್ದರೆ ಇನ್ನು ಸ್ವಲ್ಪ ಹೊತ್ತು ಇಲ್ಲೇ ಇರಿ. ನನ್ನ ಈ ಸ್ಥಿತಿಯಲ್ಲಿ ನಿಮಗೆ ಆತಿಥ್ಯ ನೀಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ, ಅಲ್ಲಿ ನೋಡಿ ವಿಸ್ಕಿ ಮತ್ತು ಸಿಗಾರ್‌ಗಳಿವೆ, ದಯವಿಟ್ಟು ತೆಗೆದುಕೊಳ್ಳಿ. ನೀವು ನನ್ನ ಜೊತೆ ಸ್ವಲ್ಪ ಸಮಯ ಕಳೆದರೆ ನನಗೆ ಬಹಳ ಸಹಾಯವಾಗುತ್ತದೆ.''

ಅವನು ಹೀಗೆ ಕೇಳಿದಮೇಲೆ ಅಲ್ಲಿ ಇರಬೇಕಾಗಿ ಬಂತು. ಫೀಲಿಕ್ಸ್ ತನ್ನ ಜೀವನದಲ್ಲಿ ನಡೆದಿದ್ದ ವಿಚಾರ ಹೇಳುವುದಕ್ಕೆ ಪ್ರಾರಂಭಿಸಿದ.

''ನಾನು ಅನೇಕ ರೀತಿಯಲ್ಲಿ ತುಂಬಾ ನತದೃಷ್ಟ. ನನ್ನ ತಂದೆ ಕೋಟ್ಯಧಿಪತಿಯಾಗಿದ್ದರೂ ನಾನು ಈಗ ಬಡವ, ಯಾವ ಕೆಲಸವೂ ಇಲ್ಲ. ಸಾಲದಕ್ಕೆ ಈ ದೊಡ್ಡ ಮನೆಯನ್ನು ನಡೆಸುವುದು ಅಸಾಧ್ಯವಾಗಿತ್ತು. ಈ ಮನೆಯನ್ನು ಬಾಡಿಗೆ ಕೊಡಲು ನನಗೆ ಅನುಮತಿ ಇರಲಿಲ್ಲ. ಅಂದ ಹಾಗೆ ನನ್ನ ತಂದೆ ಸ್ಟಾನಿಸ್ಲಾಸ್ ಸ್ಟಾನಿಫೋರ್ಡ್, ಹೆಸರು ನೀವು ಕೇಳಿರಬಹುದು; ಅವರು ನಗರದಲ್ಲಿ ದೊಡ್ಡ ಬ್ಯಾಂಕರ್ ಆಗಿದ್ದರು.''

ಅವರ ಬಗ್ಗೆ ನಾನು ಓದಿದ್ದೆ; ಸುಮಾರು ಏಳು ವರ್ಷಗಳ ಹಿಂದೆ ನಡೆದ ದೊಡ್ಡ ಹಣಕಾಸಿನ